ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ
**ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.**

**ಸಂಖ್ಯೆ : ವಾಇ : ಜಂ ನಿ : ಸುಮಪ : 2020–21** **ದಿನಾಂಕ : 02–11–2020**

## ಪತ್ರಿಕಾ ಪ್ರಕಟಣೆ

## ರೈತರು ತಮ್ಮ ಮನೆಗಳಲ್ಲಿ ಸಾಕಣೆ ಮಾಡುವ ಹಾಲು ಕರೆಯುವ ಜಾನುವಾರುಗಳಿಗೆ ಸಮ್ಮತಿ ಪತ್ರ ಪಡೆಯುವ ಅವಶ್ಯಕತೆ ಇಲ್ಲ

**ಬೆಂಗಳೂರು, ನವೆಂಬರ್ 02 (ಕರ್ನಾಟಕ ವಾರ್ತೆ):**

ಇತ್ತೀಚೆಗೆ ಮಾಧ್ಯಮಗಳಲ್ಲಿ ಡೈರಿ ಫಾರಂಗಳು ಹಾಗೂ ಗೋಶಾಲೆಗಳ ಸ್ಥಾಪನೆ ಹಾಗು ನಿರ್ವಹಣೆಗಾಗಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಅಪ್ಪಣೆಬೇಕೆಂದು ಹಾಗೂ ಈ ಬಗ್ಗೆ ಇನ್ನಿತರೆ ಅಂಶಗಳು ವರದಿಯಾಗಿರುವುದು ಮಂಡಳಿ ಗಮನಕ್ಕೆ ಬಂದಿರುತ್ತದೆ.

ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು ಅರ್ಜಿದಾರರಾದ ನುಗ್ಗೆಹಳ್ಳಿ ಜಯಸಿಂಹ ಪ್ರತಿವಾದಿ ದೆಹಲಿ ರಾಷ್ಟ್ರ ರಾಜಧಾನಿ ಪ್ರಾಂತ್ಯ ರವರ ಮೂಲ ಅರ್ಜಿ ಸಂಖ್ಯೆ.46/2018 ರ ಪ್ರಕರಣದಲ್ಲಿ ಡೈರಿ ಫಾರಂ ಮತ್ತು ಗೋಶಾಲೆಗಳಿಂದ ಉತ್ಪಾದನೆಯಾಗುವ ಘನ ತ್ಯಾಜ್ಯ ಮತ್ತು ಜಲ ಮಾಲಿನ್ಯವು ನದಿಗೆ ಸೇರುತ್ತಿರುವ ಬಗ್ಗೆ ವಿಚಾರಣೆ ನಡೆಸಿ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಸದರಿ ಚಟುವಟಿಕೆಗಳ ಪರಿಸರಾತ್ಮಕ ಅಂಶಗಳ ಕುರಿತು ಮಾರ್ಗಸೂಚಿಗಳನ್ನು ರೂಪಿಸುವಂತೆ ನಿರ್ದೇಶಿಸಿರುತ್ತದೆ. ಮುಂದುವರೆದು, ಡೈರಿ ಫಾರಂ ಹಾಗು ಗೋಶಾಲೆಗಳಿರುವ ಬಗ್ಗೆ ಹಾಗು ತ್ಯಾಜ್ಯ ಉತ್ಪಾದನೆ ಬಗ್ಗೆ ಅಂಕಿ–ಅಂಶ ಹಾಗು ಇತರೆ ವಿವರಗಳನ್ನು ರಾಜ್ಯಗಳ ಸ್ಥಳೀಯ ಸಂಸ್ಥೆಗಳಿಂದ ಪಡೆದು ಸಲ್ಲಿಸುವಂತೆ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ಸೂಚಿಸಿರುತ್ತದೆ.

ರಾಷ್ಟ್ರೀಯ ಹಸಿರು ನ್ಯಾಯಾಧೀಕರಣಕ್ಕೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಡ್ಯೆರಿ ಫಾರಂ ಹಾಗು ಗೋಶಾಲೆಗಳಲ್ಲಿ ಪರಿಸರ ನಿರ್ವಹಣೆ ಕುರಿತಾಗಿ ರೂಪಿಸಿದ ಮಾರ್ಗಸೂಚಿಗಳನ್ನು ಹಾಗೂ ರಾಜ್ಯಗಳಿಂದ ಪಡೆದು ಕ್ರೂಢೀಕರಿಸಿ ಸಲ್ಲಿಸಿದ ವರದಿ ಆಧಾರದ ಮೇಲೆ ವಿಚಾರಣೆ ನಡೆಸಿ 20.5.2020 ರಂದು ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ರಾಜ್ಯ ಮಲಿನ್ಯ ನಿಯಂತ್ರಣ ಮಂಡಳಿಗಳಿಗೆ ಹಾಗೂ ಸಂಬಂಧಿಸಿದ ಇಲಾಖೆಗಳಿಗೆ ಡ್ಯೆರಿ ಫಾರಂ ಹಾಗು ಗೋಶಾಲೆಗಳಿಂದಾಗುವ ಪರಿಸರ ಮಾಲಿನ್ಯ ತಡೆಗಟ್ಟುವ ಕುರಿತು ಹಲವು ನಿರ್ದೇಶನಗಳನ್ನು ನೀಡಿರುತ್ತದೆ.

ಇದರ ಅನುಸಾರವಾಗಿ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ: 10.07.2020 ರಂದು ಜಲ ಕಾಯ್ದೆ, 1974 ರ ಕಲಂ 18(1)(ಬಿ) ಅಡಿಯಲ್ಲಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ನಿರ್ದೇಶಿಸಿ ಡ್ಯೆರಿ ಫಾರಂಗಳನ್ನು ಕಿತ್ತಳೆ ಪ್ರವರ್ಗಕ್ಕೆ ಹಾಗು ಗೋಶಾಲೆಗಳನ್ನು ಹಸಿರು ಪ್ರವರ್ಗಕ್ಕೆ ವರ್ಗೀಕರಿಸಿದೆ ಹಾಗು ಜುಲೈ, 2020 ರಲ್ಲಿ ಡ್ಯೆರಿ ಫಾರಂ ಹಾಗು ಗೋಶಾಲೆಗಳಲ್ಲಿ ಪರಿಸರ ನಿರ್ವಹಣೆ ಕುರಿತು ಮಾರ್ಗಸೂಚಿಗಳನ್ನು ಎಲ್ಲಾ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಗಳು ಅನುಷ್ಟಾನಗೊಳಿಸಲು ಎರಡು ತಿಂಗಳೊಳಗಾಗಿ ಕ್ರಮವಹಿಸಿ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣಕ್ಕೆ ಅನುಪಾಲನಾ ವರದಿಯನ್ನು ಸಲ್ಲಿಸುವಂತೆ ದಿನಾಂಕ: 14.07.2020 ರಂದು ಸೂಚಿಸಿರುತ್ತದೆ ಹಾಗು ಎಲ್ಲಾ ರಾಜ್ಯಗಳಿಂದ ಕ್ರೂಢೀಕೃತ ಮಾಹಿತಿಯನ್ನು ದಿನಾಂಕ: 15.9.2020 ರೊಳಗೆ ನಮೂನೆ ಪ್ರಕಾರ ಸಲ್ಲಿಸುವಂತೆ ತಿಳಿಸಿರುತ್ತದೆ. ಇದರ ಪ್ರಕಾರ ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ದಿನಾಂಕ: 06.09.2020 ರಂದು ದಿನ ಪತ್ರಿಕೆಗಳಲ್ಲಿ ಸಾರ್ವಜನಿಕ ಪ್ರಕಟಣೆಯನ್ನು ಹೊರಡಿಸಿದೆ. ರಾಜ್ಯದಲ್ಲಿನ ಡ್ಯೆರಿ ಫಾರಂಗಳು ಹಾಗೂ ಗೋಶಾಲೆಗಳನ್ನು ಸ್ಥಾಪನೆ ಹಾಗು ನಿರ್ವಹಣೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯಿಂದ ಸಮ್ಮತಿ ಪತ್ರಗಳನ್ನು ಜಲ (ಮಾಲಿನ್ಯ ನಿವಾರಣ ಮತ್ತು ನಿಯಂತ್ರಣ) ಕಾಯ್ದೆ, 1974 ಹಾಗು ವಾಯು (ಮಾಲಿನ್ಯ ನಿವಾರಣ ಮತ್ತು ನಿಯಂತ್ರಣ) ಕಾಯ್ದೆ, 1981 ರ ಅಡಿಯಲ್ಲಿ ಪಡೆಯಲು ತಿಳಿಸಿರುತ್ತದೆ.

ಈ ಹಿನ್ನಲೆಯಲ್ಲಿ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಕೆಳಕಂಡ ಸ್ಪಷ್ಟೀಕರಣ ನೀಡಬಯಸುತ್ತದೆ.

ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯ ನಿರ್ದೇಶನ ದಿನಾಂಕ: 10.07.2020 ರಂತೆ ಡ್ಯೆರಿ ಫಾರಂಗಳು 15 ಅಥವಾ ಅದಕ್ಕಿಂತ ಅಧಿಕ ಹಾಲು ಕರೆಯುವ ಪ್ರಾಣಿಗಳನ್ನು ಹೊಂದಿದ್ದಲ್ಲಿ ಮಾತ್ರ ಮಾಲಿನ್ಯ

ನಿಯಂತ್ರಣ ನಿರ್ವಹಣೆ ವ್ಯವಸ್ಥೆಗೆ ಒಳಪಡುತ್ತವೆ. ರೈತರು ತಮ್ಮ ಮನೆಗಳಲ್ಲಿ ಸಾಕಣೆ ಮಾಡಿ ಹಾಲು ಕರೆಯುವ ಜಾನುವಾರುಗಳಿಗೆ ಸದರಿ ನಿರ್ದೇಶನವು ಅನ್ವಯಿಸುವುದಿಲ್ಲ.

ಗೋಶಾಲೆಗಳೆಂದರೆ, ದುರ್ಬಲ, ಅನಾರೋಗ್ಯ, ಗಾಯಗೊಂಡ, ಅಂಗವಿಕಲ ಹಾಗೂ ಅನಾಥ ಜಾನುವಾರುಗಳನ್ನು ಆರೈಕೆ ಮಾಡುವ ಪುನರ್ವಸತಿ ಕೇಂದ್ರಗಳಾಗಿದ್ದು, ಇಂತಹ ಕೇಂದ್ರಗಳು ಮಾತ್ರ ಮಾಲಿನ್ಯ ನಿಯಂತ್ರಣ ನಿರ್ವಹಣೆ ವ್ಯವಸ್ಥೆಗೆ ಒಳಪಡುತ್ತವೆ.

ಮೇಲಿನ ಎಲ್ಲ ಅಂಶಗಳನ್ನು ಗಮನಿಸಿದಲ್ಲಿ, ರೈತರು ತಮ್ಮ ಮನೆಗಳಲ್ಲಿ ಸಾಕಣೆ ಮಾಡುವ ಹಾಲು ಕರೆಯುವ ಜಾನುವಾರುಗಳಿಗೆ ಸದರಿ ನಿರ್ದೇಶನವು ಅನ್ವಯಿಸುವುದಿಲ್ಲ ಹಾಗೂ ಮಂಡಳಿಯಿಂದ ಸಮ್ಮತಿ ಪತ್ರ ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂಬುದನ್ನು ಈ ಮೂಲಕ ತಿಳಿಸಲಾಗಿದೆ ಹಾಗು ರೈತಾಪಿ ಜನರು ಈ ವಿಷಯ ಕುರಿತು ಆತಂಕಕ್ಕೆ ಒಳಪಡದಿರಲು ಮಂಡಳಿಯ ಪ್ರಕಟಣೆ ತಿಳಿಸಿದೆ.

## ಅಕಾಡೆಮಿಯ 'ಚಿತ್ರ ಸಂಗಮ' ಆನ್‌ಲೈನ್ ಚಿತ್ರೋತ್ಸವಕ್ಕೆ ಚಾಲನೆ

### ಕನ್ನಡ ಚಿತ್ರ ಸಂಸ್ಕೃತಿಯ ಕಂಪು ಪಸರಿಸುವ ಪ್ರಯತ್ನ: ಮಹೇಶ್ವರ್ ರಾವ್ ಶ್ಲಾಘನೆ

ಬೆಂಗಳೂರು, ನ.2 (ಕರ್ನಾಟಕ ವಾರ್ತೆ)– ಕರ್ನಾಟಕ ಚಲನಚಿತ್ರ ಅಕಾಡೆಮಿ ಕನ್ನಡ ರಾಜ್ಯೋತ್ಸವದ ಸುದಿನ ಒಂದು ವಿನೂತನ ಕಾರ್ಯಕ್ರಮಕ್ಕೆ ಮುಂದಡಿಯಿಟ್ಟಿದ್ದು, ಚಿತ್ರ ಸಂಗಮ ಹೆಸರಿನಲ್ಲಿ ಆನ್‌ಲೈನ್ ಚಲನಚಿತ್ರೋತ್ಸವವನ್ನು ರಾಜ್ಯೋತ್ಸವದ ಉಡುಗೊರೆಯಾಗಿ ಚಿತ್ರ ರಸಿಕರಿಗೆ ನೀಡಿದೆ.

ಕನ್ನಡದ ಶ್ರೇಷ್ಠ ಚಿತ್ರಗಳನ್ನು ಕರ್ನಾಟಕ ಚಲನಚಿತ್ರ ಅಕಾಡೆಮಿ ತನ್ನ ಅಧಿಕೃತ ಜಾಲತಾಣದಲ್ಲಿ ಪ್ರೇಕ್ಷಕರ ವೀಕ್ಷಣೆಗೆ ಅನುಕೂಲವಾಗವಂತೆ ನೀಡುತ್ತಿದ್ದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಂ.ಮಹೇಶ್ವರ ರಾವ್ ಅವರು ನವೆಂಬರ್ 1ರಂದು ಚಿತ್ರ ಸಂಗಮ ಆನ್‌ಲೈನ್ ಚಲನಚಿತ್ರೋತ್ಸವವನ್ನು ಆನ್‌ಲೈನ್ ಸಮ್ಮೇಳನ ಮೂಲಕ ಉದ್ಘಾಟಿಸಿದರು.

ಚಿತ್ರ ಸಂಗಮ ಉದ್ಘಾಟಿಸಿದ ಅವರು, ಕನ್ನಡ ಚಿತ್ರಗಳನ್ನು ಜಾಗತಿಕ ಮಟ್ಟದಲ್ಲಿ ಪರಿಚಯಿಸುವ ಹಾಗೂ ಈ ಮೂಲಕ ಕನ್ನಡದ ಚಿತ್ರ ಸಂಸ್ಕೃತಿಯನ್ನು ಜಗತ್ತಿನಾದ್ಯಂತ ಪಸರಿಸುವ ಕರ್ನಾಟಕ ಚಲನಚಿತ್ರ ಅಕಾಡೆಮಿಯ ವಿನೂತನ ಪ್ರಯತ್ನ ಶ್ಲಾಘನೀಯ ಎಂದರು.

ಕನ್ನಡ ಚಿತ್ರರಂಗದ ಈವರೆಗಿನ ಸಾಧನೆ ಅಪಾರ. ಕನ್ನಡ ಚಿತ್ರೋದ್ಯಮದಿಂದ ಜಗತ್ತಿನ ಶ್ರೇಷ್ಟ ಚಿತ್ರಗಳು ನಿರ್ಮಾಣವಾಗಿವೆ. ಬೇರೆ ಬೇರೆ ಕಾರಣಗಳಿಂದ ಅವುಗಳಲ್ಲಿ ಕೆಲವು ಶ್ರೇಷ್ಟ ಮನ್ನಣೆ ಸಿಗದಿರಬಹುದು. ಆದರೆ

ಅಕಾಡೆಮಿ ಈ ವಿನೂತನ ಪ್ರಯತ್ನ ಚಿತ್ರರಂಗವನ್ನು ಹೊಸ ದಿಕ್ಕಿಗೆ ಕೊಂಡೊಯ್ಯುವ ಎಲ್ಲ ಸಾಧ್ಯತೆಗಳು ಇವೆ. ಅಕಾಡೆಮಿಯ ಈ ಎಲ್ಲ ಪ್ರಯತ್ನಕ್ಕೆ ಸರ್ಕಾರ ಪೂರಕವಾಗಿ ಸ್ಪಂದಿಸುತ್ತದೆ. ಈ ಮೂಲಕ ಚಿತ್ರೋದ್ಯಮವನ್ನು ಪ್ರೋತ್ಸಾಹಿಸುತ್ತಿದೆ ಎಂದು ಅವರು ಹೇಳಿದರು.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಡಾ.ಪಿ.ಎಸ್.ಹರ್ಷ ಮಾತನಾಡಿ, ಕರ್ನಾಟಕ ಚಲನಚಿತ್ರ ಅಕಾಡೆಮಿಯ ಈ ವಿನೂತನ ಪ್ರಯತ್ನ ಮಹತ್ವದ ಮೈಲಿಗಲ್ಲು. ಅಕಾಡೆಮಿ ಆಶಯವೇ ಚಿತ್ರ ಪ್ರೇಕ್ಷಕರಿಗೆ ಗುಣಾತ್ಮಕ ಚಿತ್ರಗಳನ್ನು ವೀಕ್ಷಿಸಲು ವೇದಿಕೆಯನ್ನು ಸೃಷ್ಟಿಸುವುದು. ಈ ಪ್ರಯತ್ನದಲ್ಲಿ ಅಕಾಡೆಮಿಯು ಕ್ರಿಯಾಶೀಲವಾಗಿ ಮುಂದಡಿ ಇಟ್ಟಿದೆ. ಇದನ್ನು ಈಗಾಗಲೇ ಪ್ರತಿ ವರ್ಷ ಆಚರಿಸುವ ಈವರೆಗಿನ 12 ಬೆಂಗಳೂರು ಅಂತಾರಾಷ್ಟ್ರೀಯ ಚಿತ್ರೋತ್ಸವಗಳಲ್ಲಿ ತೋರಿಸಿದೆ ಎಂದರು.

ಇತ್ತೀಚಿನ ಕೊರೊನಾ ಅವಘಡದ ಸಂದರ್ಭದಲ್ಲಿ ಮನೋರಂಜನೆಯಲ್ಲದೆ ಇತರೆ ಕ್ಷೇತ್ರಗಳೂ ಸಂಕುಚಿತಗೊಂಡು ಜಾಗತಿಕ ಮಟ್ಟದಲ್ಲಿ ಸಂಕಷ್ಟ ಎದುರಿಸಬೇಕಾಯಿತು. ಇಂತಹ ಸಂದರ್ಭದಲ್ಲಿ ಆನ್‌ಲೈನ್ ಉತ್ಸವಗಳು ಪ್ರಚಲಿತವಾಗಿದ್ದು ಅನಿವಾರ್ಯವಾಯೂ ಆಗಿವೆ. ಇಂತಹ ಕ್ರಿಯಾಶೀಲ ಪ್ರಯತ್ನವನ್ನು ಇಲಾಖೆ ಸಂಪೂರ್ಣವಾಗಿ ಬೆಂಬಲಿಸುತ್ತದೆ. ಇದು ಸಾಮಾಜಿಕ ಜಾಲತಾಣಗಳ ವಿವಿಧ ವೇದಿಕೆಗಳ ಮೂಲಕ ಜಗತ್ತಿನ ಎಲ್ಲ ಮೂಲೆಗಳಿಗೆ ತಲುಪಿಸುವ ಪ್ರಯತ್ನ ಅಕಾಡೆಮಿಯಿಂದ ಆಗಬೇಕು ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಕರ್ನಾಟಕ ಚಲನಚಿತ್ರ ಅಕಾಡೆಮಿ ಅಧ್ಯಕ್ಷ ಸುನೀಲ್ ಪುರಾಣಿಕ್ ಅವರು, ಕನ್ನಡದ ಅತ್ಯಂತ ಶ್ರೇಷ್ಠ ಚಿತ್ರಗಳನ್ನ ಜನರಬಳಿಗೆ ಕೊಂಡೊಯ್ಯುವ ಪ್ರಯತ್ನವೇ ಚಿತ್ರ ಸಂಗಮ. ಪ್ರತಿ ವಾರ ಮೂರು ಚಿತ್ರಗಳನ್ನು ನಮ್ಮ ಜಾಲತಾಣದಲ್ಲಿ ಜೋಡಿಸಿದ್ದು ನವೆಂಬರ್ ತಿಂಗಳ ಐದು ವಾರವೂ ವಿವಿಧ ಚಿತ್ರಗಳನ್ನು ಚಿತ್ರ ಪ್ರೇಮಿಗಳಿಗೆ ವೀಕ್ಷಿಸುವ ಅವಕಾಶ ಕಲ್ಪಿಸಲಾಗಿದೆ. ಅಕಾಡೆಮಿಯಿಂದ ಆನ್‌ಲೈನ್ ಚಿತ್ರೋತ್ಸವದ ಮೊದಲ ಪ್ರಯತ್ನ ಇದಾಗಿದ್ದು ಮುಂದಿನ ದಿನಗಳಲ್ಲಿ ಪ್ರಾದೇಶಿಕ ಭಾಷಾ ಚಿತ್ರಗಳು, ಕಿರು ಚಿತ್ರಗಳು ಹೀಗೆ ಜಗತ್ತಿನ ಶ್ರೇಷ್ಠ ಕನ್ನಡ ಚಿತ್ರಗಳನ್ನು ಕೊಡಲಾಗುವುದು ಎಂದು ತಿಳಿಸಿದರು.

ಕರ್ನಾಟಕ ಚಲನಚಿತ್ರ ಅಕಾಡೆಮಿ ರಿಜಿಸ್ಟ್ರಾರ್ ಹಿಮಂತರಾಜು ಜಿ. ಸ್ವಾಗತಿಸಿದರು, ಅಕಾಡೆಮಿ ಸದಸ್ಯರಾದ ಶ್ರೀರಾಜ್‌ಗುಡಿ ಅವರು ವಂದಿಸಿದರು. ಅಕಾಡೆಮಿಯ ಎಲ್ಲ ಸದಸ್ಯರು ಜೂಮ್ ಸಮ್ಮೇಳನದಲ್ಲಿ ಭಾಗವಹಿಸಿದ್ದರು.

ಮೊದಲ ವಾರ ಕನ್ನಡದ ಶ್ರೇಷ್ಠ ಚಿತ್ರಗಳಾದ ಹಾಗೂ ಕನ್ನಡದ ನಾಡು ನುಡಿ, ಭಾಷೆಗೆ ಒತ್ತು ನೀಡಿ ನಿರ್ಮಿಸಿರುವ ಇಮ್ಮಡಿ ಪುಲಿಕೇಶಿ, ಕಥಾ ಸಂಗಮ, ಒಂದಾನೊಂದು ಕಾಲದಲ್ಲಿ ಚಿತ್ರಗಳು ವೀಕ್ಷಣೆಗೆ ಲಭ್ಯವಿದ್ದು, ಕರ್ನಾಟಕ ಚಲನಚಿತ್ರ ಅಕಾಡೆಮಿ ಜಾಲತಾಣ https://kcainfo.in ಇಲ್ಲಿ ಚಿತ್ರಸಂಗಮ ವನ್ನು ಕ್ಲಿಕ್ಕಿಸಿ ನೋಂದಣಿ ಮಾಡಿದರೆ ಚಿತ್ರಗಳನ್ನು ಸಾರ್ವಜನಿಕರು ವೀಕ್ಷಿಸಬಹುದಾಗಿದೆ.

ಛಾಯಾಚಿತ್ರ ಶೀರ್ಷಿಕೆ)

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಇಂದು ವಿಧಾನ ಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏಕಲವ್ಯ, ಜೀವಮಾನ ಸಾಧನೆ, ಕರ್ನಾಟಕ ಕ್ರೀಡಾ ರತ್ನ, ಕ್ರೀಡಾ ಪೋಷಕ ಮತ್ತು ಎನ್.ಎಸ್.ಎಸ್. ಪ್ರಶಸ್ತಿಗಳನ್ನು ಪ್ರದಾನ ಮಾಡಿದರು. ಕಂದಾಯ ಸಚಿವ ಆರ್. ಅಶೋಕ್, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಚಿವ ಸಿ.ಟಿ. ರವಿ ಅವರು ಉಪಸ್ಥಿತರಿದ್ದರು.